**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆಃ 133/2023**

ಚಾಸಾಃ6 ಪ್ರಾಸಾಃ4

| | | |
|---|---|---|
| ಹೆಸರು | : | ಜಗದೀಶ್ |
| ಗಂಡನ/ತಂದೆಯ ಹೆಸರು | : | ಕೆಂಚೇಗೌಡ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪಿ ಡಿ ಒ, ಸುಳ್ಳೇರಿ ಗ್ರಾಮ ಪಂಚಾಯತಿ |
| ವಾಸ | : | ಸುಳ್ಳೇರಿ. |

**ದಿನಾಂಕ 29.07.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

ನಾನು 2021 ರಿಂದ ಇಲ್ಲಿಯವರೆಗೆ ಸುಳ್ಳೇರಿ ಗ್ರಾಮ ಪಂಚಾಯತಿಯಲ್ಲಿ ಪಿ ಡಿ ಒ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 29.12.2022 ರಂದು ಅಬಕಾರಿ ಉಪನಿರೀಕ್ಷಕರು ಚನ್ನಪಟ್ಟಣ ವಲಯದಿಂದ ನನಗೆ ಆರೋಪಿ ತ್ಯಾಗರಾಜುರವರ ಚೌಡೇಶ್ವರಿ ಪ್ರಾವಿಷನ್ ಸ್ಟೋರ್ ನಲ್ಲಿ ಅಕ್ರಮವಾಗಿ ಮದ್ಯಗಳನ್ನು ದಾಸ್ತಾನು ಇಟ್ಟುಕೊಂಡಿದ್ದು ಸದರಿ ಪ್ರಾವಿಷನ್ ಸ್ಟೋರ್ ಗೆ ಸಂಬಂದಪಟ್ಟಂತೆ ಸ್ಥಳದ ಮಾಲೀಕತ್ವಕ್ಕೆ ಖಾತಾ ಎಕ್ಸ್ ಟ್ರಾಕ್ಟ್ ಮತ್ತು ಚೌಡೇಶ್ವರಿ ಪ್ರಾವಿಷನ್ ಸ್ಟೋರ್ ನಡೆಸಲು ಲೈಸೆನ್ಸ್ ಪಡೆದುಕೊಂಡಿರುವ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿಕೊಳ್ಳಲು ಪತ್ರವನ್ನು ನೀಡಿರುತ್ತಾರೆ. ಸಾಕ್ಷಿಗೆ ಈಗ ದಿಃ29.12.2022 ರ ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ಪತ್ರ ದಾಖಲೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎದು ಗುರುತಿಸಲಾಯಿತು. ಸದರಿ ಪತ್ರಕ್ಕೆ ನಾನು ದಿಃ 03.01.2023 ರಂದು 2.ಗ್ರಾ.ಪಂ/1/23-24 ರೀತ್ಯಾ ಅಬಕಾರಿ ನಿರೀಕ್ಷಕರಿಗೆ ಕವರಿಂಗ್ ಲೆಟರ್ ಜೊತೆಗೆ ಖಾತಾ ಎಕ್ಸ್ ಟ್ರಾಕ್ಟ್ ಅನ್ನು ಮತ್ತು ಜನರಲ್ ಲೈಸೆನ್ಸ್ ಅನ್ನು ಸಲ್ಲಿಸಿಕೊಂಡಿರುತ್ತೇನೆ. ಸದರಿ ಖಾತಾ ಎಕ್ಸ್ ಟ್ರಾಕ್ಟ್ ನಲ್ಲಿ ಸ್ವತ್ತಿನ ಮಾಲೀಕರು ಹೆಸರು ಸಣ್ಣೇಗೌಡ ಬಿನ್ ಚಿಕ್ಕಬಸವೇಗೌಡ ಎಂದು ನಮೂದಾಗಿದೆ ಮತ್ತು

ಜನರಲ್ ಲೈಸೆನ್ಸ್ ನಲ್ಲಿ ಅರ್ಜಿದಾರರ ಹೆಸರು ಸಣ್ಣೇಗೌಡ ಎಂದು ನಮೂದಗಿದೆ. ಜನರಲ್ ಲೈಸೆನ್ಸ್ ಪಡೆಯುವ ಉದ್ದೇಶ ಪ್ರಾವಿಷನ್ ಸ್ಟೋರ್ ಮತ್ತು ಹೋಟೆಲ್ ನಡೆಸಲೆಂದು ಪಡೆದಿರುತ್ತಾರೆ. ಸಾಕ್ಷಿಗೆ ಈಗ ದಿಃ03.01.2023 ರ ಕವರಿಂಗ್ ಲೆಟರ್ ಅನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಖಾತಾ ಎಕ್ಸ್ ಟ್ರಾಕ್ಟ್ ಅನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಸುಳ್ಯೇರಿ ಗ್ರಾಮ ಪಂಚಾಯತಿಯಿಂದ ನೀಡಿದ ಜನರಲ್ ಲೈಸೆನ್ಸ್ ಅನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ವೈಎಂಎಸ್ ವಕೀಲರಿಂದಃ</u>**

ಲೆಸೆನ್ಸ್ ಸಣ್ಣೇಗೌಡ ರವರ ಹೆಸರಿನಲ್ಲಿದೆ ಎಂದರೆ ನಿಜ. ನಿಪಿ-5 ರ ಮನವಿ ಪತ್ರದಲ್ಲಿರುವ ಸ್ಥಳದ ಚೆಕ್ಕು ಬಂದಿ ಮತ್ತು ನಾನು ನೀಡಿರುವ ನಿಪಿ-7 ರ ಚೆಕ್ಕು ಬಂದಿ ವ್ಯತ್ಯಾಸದಿಂದ ಕೂಡಿದೆ ಎಂದರೆ ನಿಜ. ಲೈಸೆನ್ಸ್ ನೀಡಬೇಕಾದರೆ ಅದರ ಉದ್ದೇಶ ತಿಳಿಸಬೇಕಾಗುತ್ತದೆ ಎಂದರೆ ನಿಜ. ನಿಪಿ-8 ರ ಜನರಲ್ ಲೈಸೆನ್ಸ್ ನಲ್ಲಿ ಹೋಟೆಲ್ ಎಂದು ನಮೂದು ಮಾಡಿಲ್ಲ ಎಂದರೆ ನಿಜ. ಪೋಲಿಸರ ಮಾತನ್ನು ಕೇಳಿ ಸುಳ್ಳು ದಾಖಲಾತಿಗಳನ್ನು ನೀಡಿರುತ್ತೇನೆಂದರೆ ಸುಳ್ಳು. ನಿಪಿ- 7ರಲ್ಲಿ ಮನೆ ಎಂದು ನಮೂದು ಎಂದರೆ ನಿಜ. ಅದರಲ್ಲಿ ಹೋಟೆಲ್ ಮತ್ತು ಉದ್ಯಮ ಎಂದು ನಮೂದು ಮಾಡಿಲ್ಲ ಎಂದರೆ ನಿಜ. ನಾನು ಸುಳ್ಳು ದಾಖಲೆಗಳನ್ನು ನೀಡಿ,ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.

**<u>ಮರುವಿಚಾರಣೆ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**